**ದಿನಾಂಕಃ 10-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಬಿ.ಟಿ.ವಿ.ಎಸ್. ಆರೋಪಿತರ ಪರ ವಕೀಲರಿಂದಃ**

**5.** ನಾನು **7** ನೇ ತರಗತಿ ಪಾಸಾಗಿದ್ದೇನೆ. **2019** ನೇ ಇಸವಿಯಲ್ಲಿ ಆರೋಪಿತರು ನಿಖರವಾಗಿ ಯಾವ ದಿನಾಂಕದಂದು ಗಲಾಟೆ ಮಾಡಿದರು ಎಂದು ಹೇಳಲು ಬರುವುದಿಲ್ಲ. ನಾನು ಮಣ್ಣು ಒಡೆಯಲು ಹೋಗಿರಲಿಲ್ಲ ಕಾರಣ ಅಲ್ಲಿ ಏನು ಗಲಾಟೆ ಆಯಿತು ಎಂಬುದು ನನಗೆ ಗೊತ್ತಿಲ್ಲ ಎನ್ನುವುದು ನಿಜ. ಗಲಾಟೆಯ ವಿಚಾರ ನನಗೆ ಗೊತ್ತಿಲ್ಲ ಎಂದರೆ ಆರೋಪಿತರು ಬರುವಷ್ಟರಲ್ಲಿಯೇ ನಾನು ಗಾಡಿ ತೆಗೆದುಕೊಂಡು ಹೋಗಿದ್ದೆ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿಲ್ಲ ಎನ್ನುವುದು ನಿಜ. ಪಿರ್ಯಾದುದಾರರಿಗೆ ಸಹಾಯವಾಗಲೆಂದು ನಾನು ಸುಳ್ಳು ಸಾಕ್ಷ್ಯ ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಘಟನೆ ಬಗ್ಗೆ ನನಗೆ ಏನೂ ಗೊತ್ತಿಲ್ಲದಾಗ್ಯೂ ಪಿರ್ಯಾದುದಾರನ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳಲು ಬಂದಿದ್ದೇನೆ ಎಂದರೆ ಘಟನೆ ಬಗ್ಗೆ ನನಗೆ ಗೊತ್ತಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.